**ಓಂ ಶಾಂತಿ, ಬಾಪ್ ದಾದಾ. ಅವ್ಯಕ್ತ ಮುರಳಿ 21-01-1969.**

(ओम शान्ति, बापदादा. अव्यक्त मुरली 21-01-1969)

***ಶರೀರ ಬಿಟ್ಟರೂ ಕೈ ಮತ್ತು ಜೊತೆಯನ್ನು ಬಿಟ್ಟಿಲ್ಲ***

(शरीर छूटा परन्तु हाथ और साथ नहीं)

ಎಲ್ಲರೂ ಅವ್ಯಕ್ತ ಮೂರ್ತಿಯಾಗಿ ಕುಳಿತಿರುವಿರಾ? ವ್ಯಕ್ತ ರೂಪದಲ್ಲಿ ಇರುತ್ತಾ ಅವ್ಯಕ್ತ ಸ್ಥಿತಿಯಲ್ಲಿರಬೇಕು. ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾದಾಗ ಸಮಸ್ಯೆಗಳು ಇರುವುದಿಲ್ಲ. ವರ್ತಮಾನ ಸಮಯದಲ್ಲಿ ನಡೆಯುತ್ತಿರುವಂತಹ ಎಲ್ಲಾ ಪಾತ್ರಗಳು ಮಕ್ಕಳನ್ನು ಅತಿ ಶೀಘ್ರವಾಗಿ ಅವ್ಯಕ್ತ ಮಾಡುವ ಸಾಧನಗಳಾಗಿವೆ. ಕಳವಳಗೊಳ್ಳುವ ಅವಶ್ಯಕತೆಯಿಲ್ಲ. ಆರಂಭದಲ್ಲಿ ಯಜ್ಞದ ಸ್ಥಾಪನೆ ಸಹಜವಾಗಿಯೇ ಆಗಿತ್ತು. ಯಜ್ಞದ ಸ್ಥಾಪನೆಯ ಸಮಯದಲ್ಲಿ ತಾವು ಬಂದಾಗ ತಮ್ಮೆಲ್ಲರಿಂದ ನಿಶ್ಚಯ ಪತ್ರವನ್ನು ಬರೆಸಿಕೊಳ್ಳಲಾಗಿತ್ತು. ಒಂದು ವೇಳೆ ಬ್ರಹ್ಮಾ ಬಾಬಾ ಹೋದರೂ ನಮ್ಮ ಸ್ಥಿತಿ, ನಮ್ಮ ನಿಶ್ಚಯ ಅಚಲವಾಗಿರುತ್ತದೆ ಎಂದು, ಆ ನಿಶ್ಚಯ ಪತ್ರ ನೆನಪಿದೆಯಾ? *ವಿಘ್ನಗಳು ಬಂದಾಗ ಯಾವುದೇ ರೀತಿಯ, ಯಾವುದೇ ಸ್ಥಿತಿ ಅನುಸಾರ, ಸಂಶಯ ಬರದೇ ಇರುವುದನ್ನು ನಿಶ್ಚಯ ಎಂದು ಕರೆಯಲಾಗುತ್ತದೆ* .

ಪರಿಸ್ಥಿತಿಗಳು ಬದಲಾಗಲೇಬೇಕು, ಬದಲಾಗುತ್ತಲೇ ಇರುತ್ತವೆ. ಆದರೆ " *ಜಗತ್ತು ಬದಲಾದರೂ, ನಾವು ಬದಲಾಗುವುದಿಲ್ಲ* " ಎಂಬ ಗೀತೆ ತಮ್ಮದಾಗಿತ್ತು. ಇಂದಿನ ಈ ಸಂಘಟನೆಯಲ್ಲಿ ನಿಶ್ಚಯ ಬುದ್ಧಿಯವರೇ ಕುಳಿತಿರುವಿರಲ್ಲವೇ? ಇಲ್ಲಿವರೆಗೂ ಇರುವ ನಿಶ್ಚಯದ ಎಲ್ಲಾ ಆಧಾರಗಳು ಹೋಗಲೇಬೇಕು. ಆಧಾರಗಳು ಇಲ್ಲದಿದ್ದರೂ ಬುನಾದಿ ಶಕ್ತಿಶಾಲಿಯಾಗಿರಬೇಕೆಂದು ಮಮ್ಮಾ ಹೇಳುತಿದ್ದರು. ಒಂದು ವೇಳೆ ಬುನಾದಿ ಗಟ್ಟಿಯಾಗಿಲ್ಲದಿದ್ದರೆ ಆಧಾರದ ಅವಶ್ಯಕತೆ ಇರುತ್ತದೆ. ಯಾವ ಆಧಾರ? ಬಾಬಾರವರ ಆಧಾರ, ಸಂಘಟನೆಯ ಆಧಾರ, ಪರಿವಾರದ ನಿಯಮಗಳ ಆಧಾರಗಳನ್ನು ಬಿಡಬಾರದು. ಆದರೆ ಪರೀಕ್ಷೆಯ ಸಮಯದಲ್ಲಿ ಮುಂದೆ ಬರುವ ದೃಶ್ಯದಿಂದ ನಿಶ್ಚಯ ಖಂಡಿತವಾಗಬಾರದಷ್ಟೇ. ನಿಶ್ಚಯ ಅಖಂಡ ವಾಗಿರುತ್ತದೆ. ಕತ್ತರಿಸಿದರೂ ಅದು ತುಂಡಾಗುವುದಿಲ್ಲ. ಈ ರೀತಿಯ ನಿಶ್ಚಯ ಬುದ್ಧಿಯವರು ಕೊರಳಹಾರವಾಗುತ್ತಾರೆ.

ಬ್ರಹ್ಮಬಾಬಾ ತಮ್ಮೆಲ್ಲರಿಗೂ ಬಹಳ ಪ್ರಿಯರೇ? ಪ್ರಿಯರಾಗಿದ್ದರು ಅಲ್ಲ, ಪ್ರಿಯರಾಗಿದ್ದಾರೆ. ಅವರು ಹೇಳುತ್ತಿರಲಿಲ್ಲವೇ? ಎಲ್ಲಾ ವಿಚಾರಗಳನ್ನು ಮೊದಲೇ ಹೇಳಲಾಗಿದೆ. ಸಮಯಕ್ಕೆ ಸರಿಯಾಗಿ ನೆನಪಿಗೆ ಬರುವುದೇ ತೀವ್ರ ಪುರುಷಾರ್ಥವಾಗಿದೆ. ನೆನಪು ಮಾಡಿಕೊಳ್ಳಿ. ಅವರೂ ಸಹ ಮಕ್ಕಳನ್ನು ಬಲಶಾಲಿ ಮಾಡಲು ಹೇಳುತ್ತಿದ್ದರು. "ಬಾಪ್ ದಾದಾ ಮಕ್ಕಳ ಶೃಂಗಾರವನ್ನು ಬಹಳಷ್ಟು ಮಾಡಿದ್ದಾರೆ, ಆದರೆ ಮಕ್ಕಳು ಅಷ್ಟು ಶೃಂಗಾರಧಾರಿಯಾಗಿ ತಯಾರಾಗಿಲ್ಲ. ಒಂದು ದಿನ ಈ ತಂದೆ ಮಾಡಿದ ಶೃಂಗಾರವನ್ನು ನೆನಪು ಮಾಡಿಕೊಳ್ಳುವ ಸಮಯ ಬರುವುದು. ಇದೇ ಆ ಸಮಯವಾಗಿದೆ". ಮೊದಲು ಅವರು ತಮ್ಮನ್ನು ತಾವು ನಿರಹಂಕಾರಿ, ನಮ್ರಚಿತ್ತ ಎಂದು ಹೇಳುತ್ತಾ ಅನೇಕ ಮಕ್ಕಳಿಗೆ 'ನಾನು ಸಹ ಇನ್ನೂ ಸಂಪೂರ್ಣ ವಾಗಿಲ್ಲ, ಇನ್ನೂ ನಿರಂತರ ದೇಹಿ ಅಭಿಮಾನಿಯಾಗಿಲ್ಲ' ಎಂದು ಹೇಳುತ್ತಿದ್ದರು. ಆದರೆ ತಮ್ಮ ಅನುಭವದ ಆಧಾರದಿಂದ ಈ 3-4 ತಿಂಗಳಗಳಲ್ಲಿ ತಾವು ಗಮನ ಕೊಟ್ಟಿರಬಹುದು, ಸಮ್ಮುಖದಲ್ಲಿ ಮಿಲನ ಮಾಡುವ ಸೌಭಾಗ್ಯ ಸಿಕ್ಕಾಗ ಯಾವ ಅನುಭವ ಮಾಡಿರಬಹುದು? ಬ್ರಹ್ಮಾ ಬಾಬಾ ಈಗ ಸಾಕಾರಿಯಾಗಿಲ್ಲ, ಆದರೆ ಅವ್ಯಕ್ತ ಆಕಾರಿ ರೂಪಧಾರಿಯಾಗಿದ್ದಾರೆ ಎಂದು. ಕೆಲವು ವರ್ಷಗಳ ಹಿಂದೆ ಚಿಕ್ಕಪುಟ್ಟ ಮಾತುಗಳನ್ನು ಕೇಳುತ್ತಿದ್ದರು, ಸಮಯ ಕೊಡುತ್ತಿದ್ದರು, ಆದರೆ ಇತ್ತೀಚಿಗೆ ಏನನ್ನು ನೋಡಿದ್ದೀರಿ? ಈ ಚಿಕ್ಕಪುಟ್ಟ ಮಾತುಗಳನ್ನು ಕೇಳದಿರುವ ಕಾರಣವೂ ಇದೇ ಆಗಿತ್ತು? ಆ ಸಮಯ ನಿರಂತರ ತಂದೆಯ ನೆನಪಿನಲ್ಲಿ ಕಳೆಯುತ್ತಿತ್ತು. ಅವರ ಮಸ್ತಕದಲ್ಲಿ ನಕ್ಷತ್ರವೊಂದು ಹೊಳೆಯುತ್ತಿರುವುದನ್ನು ಗಮನಿಸಿರಲಿಲ್ಲವೇ? ಅವ್ಯಕ್ತ

ಸ್ಥಿತಿಯಲ್ಲಿದ್ದವರು ಅವ್ಯಕ್ತ ಮೂರ್ತಿಯನ್ನು ಅರಿತರು, ಗುರುತಿಸಿದರು. ಅವ್ಯಕ್ತ ಸ್ಥಿತಿಯಲ್ಲಿ ಇಲ್ಲದವರು ಅಮೂಲ್ಯವಾದ ರತ್ನವನ್ನು ಸಂಪೂರ್ಣವಾಗಿ ಗುರುತಿಸಲಿಲ್ಲ.

ಈಗಲೂ ಸ್ಥಾಪನೆಯ ಕಾರ್ಯ ಬ್ರಹ್ಮಾನದೇ ಆಗಿದೆ ಹೊರತು ನಮ್ಮದಲ್ಲ. ಈಗಲೂ ಮಕ್ಕಳ ಪಾಲನೆ ಬ್ರಹ್ಮನಿಂದಲೇ ಆಗುವುದು. ಸ್ಥಾಪನೆಯ ಅಂತ್ಯದವರೆಗೂ ಬ್ರಹ್ಮಾನ ಪಾತ್ರ ಇದ್ದೇ ಇದೆ. ಈಗ ಮಕ್ಕಳು 'ಇನ್ನು ಮುಂದೆ ಬ್ರಹ್ಮಾರವರಿಂದ ಹೇಗೆ ಶಿಕ್ಷಣ ಸಿಗುತ್ತದೆ 'ಎಂದು ಯೋಚಿಸಿತ್ತಿರಬಹುದು. ವಾಸ್ತವದಲ್ಲಿ ಸ್ಥಿತಿಗನುಸಾರವಾಗಿ ಹೇಗೆ ?ಏಕೆ? ಎಂಬ ಪ್ರಶ್ನೆಗಳು ಬರಬಾರದು. ಆದರೆ ಕೆಲವು ಮಕ್ಕಳಲ್ಲಿ ಪ್ರಶ್ನೆಗಳು ಅಷ್ಟೇ ಅಲ್ಲ , ಕೋಲಾಹಲದ ಸಾಗರವೇ ಪ್ರಾರಂಭವಾಗಿದೆ.  ಈ ಮೊದಲ ಪ್ರಶ್ನೆಪತ್ರಿಕೆಯಲ್ಲಿ ಕೆಲವರು ಮಾತ್ರ ಉತ್ತೀರ್ಣರಾದರು. ಸ್ವಲ್ಪವಾದರೂ ತಾಳಿಕೊಳ್ಳಿ, ಅವಿನಾಶಿ ಜ್ಞಾನ, ಅವಿನಾಶಿ ಶಿಕ್ಷಣವಿದ್ದಾಗ ಪ್ರಶ್ನೆಗಳ  ಕೊಲಾಹಲವೇಕೆ? ಆದರೂ ಅದೇ ಕೋಲಾಹಲವನ್ನು ಶಾಂತ ಮಾಡಲು ತಿಳಿಸುತ್ತಿದ್ದೇವೆ. ಕ್ಲಾಸ್ ಹೇಗೆ ನಡೆಯುತ್ತಿತ್ತೋ ಹಾಗೆಯೇ ನಡೆಯುವುದು. ಏನು ಹೇಳುವೆವು? ನಿಮಿತ್ತರಾದ ಬ್ರಹ್ಮಾರವರ ತನುವನಿಂದ ನುಡಿಸಲ್ಪಟ್ಟ ಮುರಳಿಯೇ ಮುರಳಿಯಾಗಿದೆ, ಸಂದೇಶಿಯರಿಂದ ಸ್ವಲ್ಪ ಸಮಯ ಮಾಡುವ ಸೇವೆಗೆ ಮುರಳಿ ಎನ್ನಲಾಗುವುದಿಲ್ಲ. ಆ ಮುರಳಿಯಲ್ಲಿ ಜಾದೂ ಇಲ್ಲ. ಬಾಪ್ ದಾದಾರವರ ಮುರಳಿಯಲ್ಲಿಯೇ ಜಾದೂ ಇದೆ. ಅದರಿಂದ ನುಡಿಸಲ್ಪಟ್ಟ ಮುರಳಿಗಳನ್ನು ಈಗ ಪುನರಾವರ್ತನೆ ಮಾಡಿ. ಮೊದಲು ಅಂಚೆಯಲ್ಲಿ ಹೇಗೆ ಹೋಗುತ್ತಿತ್ತೋ ಹಾಗೆಯೇ ಮುಖ್ಯ ಸೇವಾ ಕೇಂದ್ರಗಳಿಗೆ ಅಬುದಿಂದ ಹೋಗುತ್ತಿರುವುದು. ಒಂದು ವರ್ಷದ ಹಿಂದೆ ನುಡಿಸಿದ ಮುರಳಿ ನಿಮಗೆ ನೆನಪಿದೆಯಾ? ನಿನ್ನೆ ಓದಿದ್ದು ನೆನಪಿರಲಿಕ್ಕಿಲ್ಲ. ಇನ್ನು ಕೆಲವು ಜ್ಞಾನ ಬಿಂದುಗಳು ಅನೇಕ ಬಾರಿ ಓದಿದಾಗಲೂ ಬುದ್ಧಿಯಲ್ಲಿ ಉಳಿಯುವುದಿಲ್ಲ. ಅದರಿಂದ ಮುರಳಿ ಹಾಗೂ ಪತ್ರದ ಸಂಬಂಧ ಹೇಗಿತ್ತೋ ಹಾಗೆಯೇ ಇರುವುದು. ತಾವು ಮಧುಬನಕ್ಕೆ ಹೇಗೆ ಮನಶ್ಚೇತನಗೊಳ್ಳಲು ಬರುತ್ತಿದ್ದಿರೋ? ಹಾಗೆಯೇ ಬರುವಿರಿ. ಏನು ಮಾಡುವುದು? ಯಾರನ್ನು ಭೇಟಿಯಾಗಲು ಬರುವುದು? ಎಂಬ ಪ್ರಶ್ನೆಗಳು ಈಗ ಬರುತ್ತವೆಯೇ? ಯಾರಿಂದ ಮನಶ್ಚೇತನಗೊಳ್ಳುವಿರಿ?ಮುಖ್ಯ ನಿಮಿತ್ತರಾದ ಭಾಗ್ಯಶಾಲಿ ನಕ್ಷತ್ರಗಳೊಂದಿಗೆ ಸಂಪೂರ್ಣ ಸಂಬಂಧ ವಿಟ್ಟುಕೊಂಡು ತಮ್ಮ ಸೇವಾಕೇಂದ್ರಗಳ ಬಗ್ಗೆ, ಉನ್ನತಿಯ ಬಗ್ಗೆ ,ಸಮಸ್ಯೆಗಳ ಬಗ್ಗೆ, ಹೊಸದಾಗಿ ಹೂದೋಟದಲ್ಲಿ ಅರಳುವ ಹೂಗಳ ಬಗ್ಗೆ, ಅವರಿಗೆ ಸಂಘಟನೆಯ ಸಾಕ್ಷಾತ್ಕಾರ ಮಾಡಿಸಲು ಮಧುಬನಕ್ಕೆ ಕರೆ ತನ್ನಿ. ಇಂತಹ ಸಂಘಟನೆಯ ನಡುವೆ ನಿಮಿತ್ತರಾದ ಸಂದೇಶಿಯ ಮೂಲಕ ಬಾಪ್ ದಾದಾ ಸಂಪೂರ್ಣ ಸೇವೆ ಮಾಡುವರು.

ಮತ್ತೇನಾದರೂ ಪ್ರಶ್ನೆ ಉಳಿಯಿತೇ? ತಮ್ಮ ಬ್ರಹ್ಮಾತಂದೆ 100 ವರ್ಷಗಳಿಗಿಂತ ಮುಂಚಿತವಾಗಿಯೇ ಹೊರಟು ಹೋದ ಬಗ್ಗೆ ಜನ ಕೇಳುವರೆಂದು ನೀವು ಯೋಚಿಸುತ್ತಿರಬಹುದು. ಇದು ಬಹಳ ಸಹಜ ಪ್ರಶ್ನೆಯಾಗಿದೆ. ವಯಸ್ಸಂತೂ 100 ಕ್ಕೆ ಸಮೀಪವಿತ್ತು.100 ವರ್ಷಗಳೆಂದು ಹೇಳಿದ್ದು ತಪ್ಪೇನಿಲ್ಲ. ಅಲ್ಪ ಸ್ವಲ್ಪ ಉಳಿದದ್ದನ್ನು ಆಕಾರ ರೂಪದಲ್ಲಿ ಪೂರ್ಣ ಮಾಡಲಾಗುತ್ತದೆ. 100 ವರ್ಷ ಬ್ರಹ್ಮಾರವರ ಸ್ಥಾಪನೆಯ ಪಾತ್ರವಿದೆ. ಅದಂತೂ ಪೂರ್ಣವಾಗಲೇಬೇಕು. ಆದರೆ ಬ್ರಹ್ಮಾರ  ನಂತರ ಬ್ರಾಹ್ಮಣರ ಪಾತ್ರ ಈಗ ನಡೆಯುವುದು. ಬ್ರಹ್ಮಾರವರು ಬ್ರಾಹ್ಮಣರನ್ನು ಹೇಗೆ ರಚಿಸಿದರು? ಬ್ರಹ್ಮಾ ತನ್ನ ರಚನೆಯನ್ನು ನೋಡುವುದಿಲ್ಲವೇ? ನಿಮಗೀಗ ಸಂಗಮದ ಜವಾಬ್ದಾರಿಯ ಕಿರೀಟವನ್ನು ಕೊಡುವುದಿಲ್ಲವೇ? ಹಾಗಾದರೆ ಸತ್ಯಯುಗದಲ್ಲಿ   ದೇವತೆಗಳು ಹೇಗಾಗುವಿರಿ? ಇಲ್ಲಿಯ ಜವಾಬ್ದಾರಿಯೇ ಅಲ್ಲಿಗೆ ಬುನಾದಿ. ಆದ್ದರಿಂದ ಯಾರು ಪ್ರಶ್ನೆ ಕೇಳಿದರೂ ಅವರಿಗೆ ಬ್ರಹ್ಮಾನಿಂದ ಸ್ಥಾಪನೆ ಆಗಲೇಬೇಕು ಎಂಬ ಉತ್ತರವನ್ನು ಕೊಡಿ.

ಈಗ ಮಕ್ಕಳ ಅಭ್ಯಾಸದ ಸಮಯ ಬಹಳ ಸಮೀಪ ಬಂದಿದೆ. ಇದರ ಬಗ್ಗೆ ಮಮ್ಮಾರವರು ನಂತರ ಪ್ರತಿಯೊಂದು ಮುರಳಿಯಲ್ಲಿ ಸೂಚನೆಗಳನ್ನು ಕೊಟ್ಟಿದ್ದಾರೆ. ಪ್ರಶ್ನೆ ಪತ್ರಿಕೆಯಲ್ಲಿ ತಿಥಿ-ತಾರೀಖನ್ನು ಹೇಳಲಾಗುತ್ತದೆಯೇ? ಮೊದಲೇ ಹೇಳದನ್ನು ಪ್ರಶ್ನೆ ಪತ್ರಿಕೆ ಎನ್ನಲಾಗುತ್ತದೆಯೇ? ಅನಿರೀಕ್ಷಿತವಾಗಿ ಬರುವುದನ್ನು ಪ್ರಶ್ನೆ ಪತ್ರಿಕೆ ಎನ್ನುತ್ತಾರೆ. ಯಾರ ಮನಸ್ಸಿನಲ್ಲಾದರೂ ಇದ್ದದ್ದಾದರೆ ಅದನ್ನು ಅನಿರೀಕ್ಷಿತ ಎನ್ನಲಾಗುವುದಿಲ್ಲ. ಫಲಿತಾಂಶದಲ್ಲಿ ಸಂಪೂರ್ಣ ಉತ್ತೀರ್ಣರಾಗಿರಲಿಲ್ಲ. ಪ್ರತಿಯೊಬ್ಬರಲ್ಲಿಯೂ ಅಲ್ಪ-ಸ್ವಲ್ಪ

ಕೊರತೆಯನ್ನು ನೋಡಿದರು ಆದರೂ ಪರವಾಗಿಲ್ಲ. ಏಕಂದರೆ ಪುರುಷಾರ್ಥದ ಸಮಯವಾಗಿದೆ. ಆ ಪ್ರಮಾಣಕ್ಕೆ ಫಲಿತಾಂಶ ಚೆನ್ನಾಗಿದೆಯೆಂದು ಹೇಳಬಹುದು. ಬಾಪ್ ದಾದಾ ಇಬ್ಬರೂ ಒಂದು ವಿಷಯದ ಬಗ್ಗೆ ಖುಷಿಯಾಗಿದ್ದರು. ಅದಾವುದು? ಮಕ್ಕಳು ಸಂಘಟನೆ ಮತ್ತು ಸ್ನೇಹ ಎರಡರ ಪ್ರತ್ಯಕ್ಷ ಪ್ರಮಾಣವನ್ನು ನೀಡಿದರು. ಬ್ರಹ್ಮಾತಂದೆಯವರು ವತನದಿಂದ ಇದನ್ನೇ ನೋಡುತ್ತಿದ್ದರು ಯಾವಾಗ ಯಾರು ಬರುತ್ತಾರೆ, ಹೇಗೆ ಬರುತ್ತಾರೆ, ಯಾವ ಆತ್ಮಿಕ ಸ್ಥಿತಿಯಿಂದ ಬರುತ್ತಾರೆ, ಯಾವ ಸ್ಥಿತಿಯಿಂದ ಮಿಲನ ಮಾಡುತ್ತಾರೆ ಎಂದು, ಇದರ ಫಲಿತಾಂಶವನ್ನು ಬಾಪ್ ದಾದಾ ಒಟ್ಟಿಗೆ ನೋಡುತ್ತಿದ್ದರು. ಆದ್ದರಿಂದ ಪ್ರತಿಯೊಬ್ಬರೂ ತಮ್ಮನ್ನು ತಾವು ನೋಡಿಕೊಂಡು ತಮ್ಮಲ್ಲಿರುವ ಕೊರತೆಯನ್ನು ದೂರ ಮಾಡಿಕೊಳ್ಳಿ.

ಇಂದಿನಿಂದ ತಮ್ಮೆಲ್ಲರಿಗೆ ಯಾರು ನಿಮಿತ್ತರು? ಅದನ್ನಂತೂ ತಾವೆಲ್ಲ ತಿಳಿದೇ ಇರುವಿರಿ, ದೀದಿಯಂತೂ ಇದ್ದಾರೆ ಜೊತೆಗೆ ಕುಮಾರಕಾ ಸಹಯೋಗಿಯಾಗಿರುವರು. ಎಲ್ಲಾ ಕಾರ್ಯವ್ಯವಹಾರ ಹೇಗೆ ನಡೆಯುತ್ತಿತ್ತೋ ಅದೇ ರೀತಿ ಪ್ರಧಾನಕೇಂದ್ರದಿಂದ ನಡೆಯುವುದು. ಇವರಿಬ್ಬರೂ ತಮ್ಮೆಲ್ಲರ ಮೇಲ್ವಿಚಾರಣೆಯನ್ನು  ಮಾಡುವವರು. ಅವಶ್ಯಕತೆ ಇದ್ದಾಗ ತಮ್ಮ ಸೇವಾ ಕೇಂದ್ರಗಳಿಗೆ ಬರುವರು. ಆದರೆ ಈಗಿನ ಪ್ರಶ್ನೆ ಪತ್ರಿಕೆಯೇನು ? ಇದಂತೂ ಅನಿರೀಕ್ಷಿತವಾಗಿ ಪ್ರಶ್ನೆ ಪತ್ರಿಕೆ ಬಂತು, ಆದರೆ ಮುಂದೆ ಬರಲಿರುವ ಪ್ರಶ್ನೆ ಪತ್ರಿಕೆ ಬಗ್ಗೆ ಹೇಳುತ್ತೇವೆ. ಈಗ ಏಕಮತ, ಅಂತರ್ಮುಖಿ ಮತ್ತು ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿ ಸಂಬಂಧದಲ್ಲಿ ಬನ್ನಿ. ಇದೇ ಪ್ರಶ್ನೆ ಪತ್ರಿಕೆಯ ಫಲಿತಾಂಶವನ್ನು ಬಾಪ್ ದಾದಾರವರು ನೋಡುವರು. ಅಂತ್ಯದ ಸಮಯದಲ್ಲಿ ಬ್ರಹ್ಮಾನ ತನುವಿನಿಂದ ಯಾವ ಶಿಕ್ಷಣವನ್ನು ನೀಡಲಾಯಿತೋ ಅದನ್ನು ತಾವೆಲ್ಲರೂ ಕೇಳಿಯೇ ಇರುವಿರಿ ಮತ್ತೆ ನೆನಪೂ ಇರಬಹುದು.

ಇಂದಿನ ಈ ಸಂಘಟನೆಯಲ್ಲಿ ಕೆಲವನ್ನು ಕೊಡಲು ಹಾಗೂ ತೆಗೆದು ಕೊಳ್ಳಲು ಬಂದಿರುವಿರಿ. ಇಂದು ತೆಗೆದುಕೊಳ್ಳುವವರು ಕೊಡಲು ಸಿದ್ಧರಿರುವಿರಾ? ಏನು ಕೊಡಬೇಕಾಗುತ್ತದೆಯೋ ಗೊತ್ತಿಲ್ಲ , ಹಾಗೇನೂ ಇರಲಿಕ್ಕಿಲ್ಲ ಎಂಬ ವಿಚಾರಗಳು ಯಾರ ಸಂಕಲ್ಪದಲ್ಲಿ ಬಂದವೋ ಅವರು ಕೈ ಎತ್ತಿ. ಒಂದು ವೇಳೆ ಎಲ್ಲರೂ ಸಂತುಷ್ಟರಾಗಿದ್ದರೆ ತೆಗೆದುಕೊಳ್ಳುವವರು ಕೊಡುವಾಗಲೂ ಸಂತುಷ್ಟರಾಗಿರುವರು. ಈ ಸಂಘಟನೆಯಲ್ಲಿ ಎರಡು ಮಾತುಗಳನ್ನು ದಾನ ಮಾಡಬೇಕು. ಎರಡು ಮಾತುಗಳು ಯಾವುವು? ಮುಖ್ಯವಾಗಿ 1.ಇಂದಿನಿಂದ ಪರಸ್ಪರರಲ್ಲಿ ಅವಗುಣಗಳನ್ನು ನೋಡಬಾರದು, ಕೇಳಬಾರದು ಮತ್ತು ಮನಸ್ಸಿನಲ್ಲಿ ಇಟ್ಟುಕೊಳ್ಳಬಾರದು. ಒಂದು ವೇಳೆ ಸಹೋದರ ಅಥವಾ ಸಹೋದರಿಯ ದುರ್ಬಲತೆ ಕಂಡು ಬಂದರೆ ನಿಮಿತ್ತರಿಂದ ಅವರಿಗೆ ಸೂಚನೆಗಳನ್ನು ಕೊಡಿಸಬಹುದು. 2.ಎರಡನೆಯ ಮಾತೆಂದರೆ  'ಈ ಸಂಸ್ಥೆ ಹೇಗೆ ಮುಂದುವರಿಯುವುದು ಎಂಬುದನ್ನು ಈಗ ನೋಡೋಣ' ಎನ್ನುವ ಅನೇಕ ಮಾತುಗಳನ್ನು ಅನೇಕರು ತಮ್ಮ ನಿಶ್ಚಯವನ್ನು ಅಲುಗಾಡಿಸಲು ಆಡುವರು, ಪ್ರಚಾರ ಮಾಡುವರು. ಆದರೆ ಅವರಿಗೆ ಅವಿನಾಶಿ ಆಧಾರ ಇವರಗಿದೆ ಎಂಬುದು ಗೊತ್ತಿಲ್ಲ. ತಮ್ಮ ಕಲ್ಪದ ಹಿಂದಿನ ಗಾಯನದಂತೆ 'ಅಂಗದನ ಸಮಾನ ಯಾರೇ ಅಲುಗಾಡಿಸುವ ಪ್ರಯತ್ನ ಪಟ್ಟರೂ ಕಾಲನ್ನು ಅಲುಗಾಡಿಸಬಾರದು' ಎಂಬ ಮತ್ತೊಂದು ಮಾತನ್ನು ಗಮನದಲ್ಲಿಟ್ಟುಕೊಳ್ಳಿ. ಈ ರೀತಿಯ ನಿಶ್ಚಯಬುದ್ಧಿ, ಅಡೋಲ, ಏಕರಸವಾಗಿರುವವರೇ ಮುಂಬರುವ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾಗುವರು. ಮತ್ತು ಬ್ರಹ್ಮಾರವರಿಂದ ಇಷ್ಟೊಂದು ಬ್ರಾಹ್ಮಣರ ರಚನೆಯಾಯಿತು, ಅಂದಾಗ, ಮಕ್ಕಳು ದೊಡ್ಡವರಾದ ಮೇಲೆ ತಂದೆ ನಿವೃತ್ತಿಯಾಗುವುದಿಲ್ಲವೇ?  ತಂದೆಯು ನಿವೃತ್ತಿಯ ಅವಸ್ಥೆಯಲ್ಲಿಯೂ ನಿಮ್ಮ ಜೊತೆಗಿದ್ದಾರೆ ಎಂದು ನೀವೀಗ ತಿಳಿಯಿರಿ. ಈಗ ಮಕ್ಕಳಿಗೆ ಕಾರ್ಯವನ್ನು ಕೊಟ್ಟು ನೋಡುತ್ತಾ ಇರುತ್ತಾರೆ. ಶರೀರ ಬಿಡಲಾಗಿದೆ ಆದರೆ ಜೊತೆ ಮತ್ತು ಕೈಯನ್ನು ಬಿಟ್ಟಿಲ್ಲ. ಬುದ್ಧಿಯ ಜೊತೆ ಮತ್ತು ಕೈಯನ್ನು ಬಿಟ್ಟಿಲ್ಲ. ಅದಂತೂ ಅವಿನಾಶಿ ಮತ್ತು ಕೊನೆಯವರೆಗೂ ಇರುತ್ತದೆ. ಈಗ ತಿಳಿಸಿರುವ ಈ ಎರಡು ಮಾತುಗಳನ್ನು 1.ಕೋಲಾಹಲ ವಾಗದೇ ಇರುವುದನ್ನು ದಾನ ಮಾಡಬೇಕು. 2. ಅವ ಗುಣಗಳನ್ನು ನೋಡದೆ ಇರುವ ದಾನವನ್ನು ಮಾಡಬೇಕು. ಈಗ ಎಲ್ಲರೂ ಇದನ್ನು ದಾನ ಮಾಡಬೇಕು ಏಕೆಂದರೆ ಸಂಕಲ್ಪವನ್ನಂತು ಮಾಡಿಬಿಟ್ಟದ್ದೀರಿ. ಅರ್ಥಾಥ್, ಕೊಟ್ಟುಬಿಟ್ಟದ್ದೀರಿ ಸಂಕಲ್ಪದಿಂದ ಕೊಟ್ಟಿರುವ ವಸ್ತುವನ್ನು ಯಾವಾಗಲೂ ಹಿಂತೆಗೆದುಕೊಳ್ಳಬಾರದು. ಒಂದು ವೇಳೆ ಮಾಯೆ ಅದನ್ನು ವಾಪಸ್ ತೆಗೆದುಕೊಳ್ಳುವ ಪ್ರಯತ್ನ ಮಾಡಿದರೂ ನಿಮ್ಮ ಮೇಲೆ ಪರಿಶೀಲನೆ ಇದ್ದಾಗ ನೀವು ಉತ್ತೀರ್ಣರಾಗುವಿರಿ.

ಈಗ ಇನ್ನೊಂದು ಮಾತನ್ನು ತಮ್ಮೆಲ್ಲರ ಗಮನಕ್ಕೆ ತರುತ್ತಿದ್ದೇವೆ. ಬಾಪ್ ದಾದ ರವರ ಕೊನೆಯ ಮುರಳಿಯಲ್ಲಿ ದೊರೆತ ಶಿಕ್ಷಣದಂತೆ ಧ್ಯಾನ ಸಾಕ್ಷಾತ್ಕಾರಗಳು ವ್ಯರ್ಥ ಸಮಯ ಕಳೆದಂತೆ. ಆದ್ದರಿಂದ ಇದು ಬೇಡ. ಮತ್ತು ಸಂದೇಶಿಗಳಿಂದ ಸೇವಾ ಕೇಂದ್ರಗಳಲ್ಲಿ ನಡೆಯುವ ಪಾತ್ರವನ್ನು ಪರೀಕ್ಷಿಸದೇ ಇರುವ ಸ್ಥಿತಿಯೂ ನಿಮ್ಮದಾಗಬಾರದು . ಅದರಿಂದ ನಿಮಿತ್ತರಾದ ದೀದಿ ಮತ್ತು ಕುಮಾರಿ ಅವರು ಯಾವ ಸಂದೇಶವನ್ನು ನಿಗದಿ ಪಡಿಸುವರೋ ಅವರಿಂದ ಸೂಚನೆಗಳು ಸಿಗುವವು. ಈ ಪಾತ್ರಕ್ಕಾಗಿಯೂ ಇವರು ಯಾರನ್ನು ನಿಮಿತ್ತ ಮಾಡುವರೋ ಅವರಿಂದ ರಹಸ್ಯ ಸ್ಪಷ್ಟವಾಗುವುದು. ಭೋಗದ ಸಮಯ ವೈಕುಂಠ ಮುಂತಾದ ಕಡೆಗಳಲ್ಲಿ ಹೋಗುವುದು ಸಮಯವನ್ನು ಹಾಳು ಮಾಡಿಕೊಂಡಂತೆ ಎಂಬ ಸೂಚನೆ ಕೊನೆಯ ಮುರಳಿಯಲ್ಲಿ ಇತ್ತು. ಏಕೆಂದರೆ ಈ ರೀತಿಯ ಅಲೆದಾಟ ಈಗ ಶೋಭಿಸುವುದಿಲ್ಲ. ಈಗಂತೂ ನಿರಂತರ ಯಾತ್ರೆಯಿಂದ ಮತ್ತು ಶಿಕ್ಷಣದಿಂದ ಪ್ರಾಪ್ತಿಯಾಗಿರುವುದನ್ನೇ ಧಾರಣೆ ಮಾಡಿ ಪ್ರತ್ಯಕ್ಷ ಪ್ರಮಾಣ ತೋರಿಸಬೇಕಾಗಿದೆ.

ಬ್ರಹ್ಮಾತಂದೆಯವರ ಜೊತೆಗೆ ಸ್ನೇಹವಿದ್ದರೆ ಸ್ನೇಹದ ಲಕ್ಷಣವೇನು? ಎರಡು ಹನಿ ಕಣ್ಣೀರನ್ನು ಸುರಿಸುವುದು ಸ್ನೇಹವಲ್ಲ. ಆದರೆ ಯಾವ ವಸ್ತುವಿನೊಂದಿಗೆ ಅವರ(ಬ್ರಹ್ಮಾ ತಂದೆಯ) ಸ್ನೇಹವಿತ್ತೋ ಅದರಲ್ಲಿ ನೀವು ಸ್ನೇಹ ವಿಟ್ಟುಕೊಳ್ಳುವುದನ್ನು ಸ್ನೇಹವೆಂದು ಹೇಳುತ್ತಾರೆ. ಅವರ ಸ್ನೇಹ ಸೇವೆಯೊಂದಿಗೆ ಇತ್ತು. ಕೊನೆಯವರೆಗೂ ಸೇವೆಯ ಪ್ರತ್ಯಕ್ಷ ಪ್ರಮಾಣವನ್ನು ನೀಡಿದ್ದರು ತಾನೆ? ಆದ್ದರಿಂದ ಸೇವೆಯೊಂದಿಗೆ ಪ್ರೀತಿಯಿರಲಿ, ಅವರ ಆಜ್ಞೆಗಳೊಂದಿಗೆ ಇರುವ ಪ್ರೀತಿಯನ್ನು ಸ್ನೇಹವೆಂದು ಕರೆಯಲಾಗುವುದು. ನಮ್ಮ ಅನುಮತಿ ಇಲ್ಲದೆ ಸಾಕಾರ ತಂದೆಯನ್ನು ವತನಕ್ಕೆ ಏಕೆ ಕರೆಸಿಕೊಂಡರು ಎಂದು ಯಾರೂ ತಿಳಿಯಬಾರದು. ಅನುಮತಿಯನ್ನು ಕೇಳಿದ್ದರೆ ತಾವು ಕೊಡುತ್ತಿದ್ದಿರೇ? ನಾಟಕದಲ್ಲಿ ಮೊದಲು ನೋಡಿದಂತೆ ಹೋದವರಾರೂ ಅನುಮತಿಯನ್ನು ತೆಗೆದುಕೊಂಡು ಹೋಗಿಲ್ಲ. ಅದರಿಂದ ಬ್ರಾಹ್ಮಣ ಕುಲದ ಈ ಪದ್ಧತಿ ನಾಟಕದಲ್ಲಿದೆ ಎಂದು ತಿಳಿದುಕೊಳ್ಳಿ. ನಾಟಕದಲ್ಲಿ ನಿಗದಿಯಾಗಲ್ಪಟ್ಟದ್ದು ಪದ್ಧತಿಯಾಗುವುದು.

ತಮ್ಮೆಲ್ಲರ ಬಹಳ ಪ್ರೀತಿ ಸಾಕಾರದ ಜೊತೆ ಇತ್ತೆಂದು ತಿಳಿಯುತ್ತಿರಿ? ಇತ್ತು ಅಲ್ಲ, ಈಗಲೂ ಇದೆ. ಪ್ರೀತಿಯಿಲ್ಲದಿದ್ದರೆ ಈ ಸಭೆಯಲ್ಲಿ ಹೇಗೆ ಇರುತ್ತೀರಿ? ಸಾಕಾರದಲ್ಲಿ ಅನುಸರಿಸಲು ಇವರದೇ ತನುವಿತ್ತು, ಆದ್ದರಿಂದ ಪ್ರೀತಿ ಏಕೆ ಇರುವುದಿಲ್ಲ? ಸ್ನೇಹವಿತ್ತು, ಈಗಲೂ ಇದೆ. ಇದು ತಂದೆ-ಮಕ್ಕಳ ಕುರುಹಾಗಿದೆ. ಸಾಕಾರ ತಂದೆಯು ವತನದಲ್ಲಿ ಮುಗುಳ್ನಗುತ್ತಿದ್ದರು. ಮಕ್ಕಳಿಗೆ ಸ್ನೇಹವಿದ್ದಾಗ ನನಗೇಕೆ ಇರುವುದಿಲ್ಲ? ಆದರೆ ನಾಟಕದಲ್ಲಿ ಬರುವ ಪಾತ್ರವೆಲ್ಲವೂ ಕಲ್ಯಾಣಕಾರಿಯೆಂದು ಅವರು ತಿಳಿದಿದ್ದಾರೆ. ಅವರು ವಿಚಲಿತರಾಗುವುದಿಲ್ಲ. ಅವರಂತೂ ಸಂಪೂರ್ಣ ಅಚಲ, ಆಡೋಲ, ಸ್ಥಿರವಾಗಿದ್ದರು ಹಾಗೂ ಈಗಲೂ ಇದ್ದಾರೆ. ಆದರೆ ಮಕ್ಕಳಿಗಿಂತ ಸಾವಿರ ಪಟ್ಟು ಜಾಸ್ತಿ ಸ್ನೇಹ ಅವರಲ್ಲಿದೆ. ಈಗ ಸ್ನೇಹದ ಪ್ರತ್ಯಕ್ಷ ಪ್ರಮಾಣವನ್ನು ನೀಡಿ. ಇದು ಒಂದು ರೀತಿಯ ಅಡಗಿಕೊಳ್ಳುವ ಆಟವಾಗಿತ್ತು. ಅದರಿಂದ ವಿಚಾರ ಸಾಗರ ಮಂಥನ ಮಾಡಿ, ಕೋಲಾಹಲದ ಮಂಥನವನ್ನು ಮಾಡಬೇಡಿ. ಪಡೆದುಕೊಂಡಂತಹ ಶಕ್ತಿಗಳನ್ನು ಪ್ರತ್ಯಕ್ಷದಲ್ಲಿ ತನ್ನಿ. ಭಾರತ ಮಾತೆ ಶಕ್ತಿಯ ಅವತಾರವೆಂಬುದು ಅಂತ್ಯದ ಉದ್ಘೋಷಣೆಯಾಗಿದೆ. ನಾಟಕದಲ್ಲಿ ನಿಗದಿಯಾದಂತೆ ಮಗ ತಂದೆಯನ್ನು ಪ್ರತ್ಯಕ್ಷ ಮಾಡುವನು. ಸಾಕಾರ ತಂದೆ ಹೇಳಿದರು, ನಾನು ಮಕ್ಕಳೊಂದಿಗೆ ಮಿಲನ ಮಾಡಲು ಬರುವೆನು ಎಂದು ಆದರೆ ಇಂದು ಬಂದಿದ್ದರೆ ಮಕ್ಕಳು ಕಣ್ಣೀರು ಸುರಿಸುತ್ತಿದ್ದರು. ಒಳ್ಳೆಯದು.

**ಬಾಪ್ ದಾದಾ ಗುಲ್ಜಾರ ಸಂದೇಶಿಯ ತನುವಿನಲ್ಲಿ ಬಂದು ಮಹಾವಾಕ್ಯಗಳನ್ನು ಉಚ್ಚರಿಸಿದರು.**

ತಮ್ಮನ್ನು ಆಕಾರಿಯನ್ನಾಗಿ ಮಾಡಲು ಬಾಪ್ ದಾದಾರವರು ಇನ್ನೂ ಕಾಯಂ ಇದ್ದಾರೆ ಹಾಗೂ ಕಾಯಂ ಇರುವರು. ಈಗ ಬಾಪ್ ದಾದಾ ತಾವೆಲ್ಲ ಆತ್ಮಿಕ ರತ್ನಗಳನ್ನು ಮಿಲನ ಮಾಡಿ ವಿದಾಯವನ್ನು ತೆಗೆದುಕೊಂಡು, ಪುನಃ ಮಿಲನ ಮಾಡೋಣ. ಬಾಪ್ ದಾದಾ ಮತ್ತು ಕಲ್ಯಾಣ. ಮತ್ತೊಂದು ಶಬ್ದವೇ ಇಲ್ಲ.

**ಅವ್ಯಕ್ತ ಮುರಳಿ 21-01-1969**

**ಶರೀರ ಬಿಟ್ಟರು ಕೈ ಮತ್ತು ಜೊತೆಯನ್ನು ಬಿಟ್ಟಿಲ್ಲ.**

ಎಲ್ಲರೂ ಅವ್ಯಕ್ತ ಮೂರ್ತಿಯಾಗಿ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾದಾಗ ಸಮಸ್ಯೆಗಳು ಬರುವುದಿಲ್ಲ. ವರ್ತಮಾನದಲ್ಲಿ ನಡೆಯುತ್ತಿರುವ ಎಲ್ಲಾ ಪಾತ್ರಗಳು ಮಕ್ಕಳನ್ನು ಅತಿಶೀಘ್ರವಾಗಿ ಅವ್ಯಕ್ತ ಮಾಡುವ ಸಾಧನಗಳಾಗಿವೆ. ಎಂದು ಹೇಳುತ್ತಾ.... ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಯೋಗ ಸ್ಥಿತಿಯಲ್ಲಿ ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಯೋಗಸ್ಥಿತಿ / ಆತ್ಮಿಕಸ್ಥಿತಿ**

ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ವಿಘ್ನಗಳು ಬಂದಾಗ ಯಾವುದೇ ರೀತಿಯ, ಯಾವುದೇ ಸ್ಥಿತಿಯನುಸಾರ, ಸಂಶಯ ಬರದೇ ಇರುವ ನಿಶ್ಚಯ ಬುದ್ಧಿ ಸ್ವರೂಪ.

2.ನಾನು "ಜಗತ್ತು ಬದಲಾದರೂ ನಾನು ಬದಲಾಗುವುದಿಲ್ಲ" ಎಂಬ ಸ್ಲೋಗನನ್ನು ನಿಜ ಜೀವನದಲ್ಲಿ ಧಾರಣೆ ಮಾಡಿದ್ದೇನೆ.

3. ನಾನು ನಿರಾಧಾರವಾದ ನಿಶ್ಚಯ ಬುದ್ಧಿ ಸ್ವರೂಪ.

4. ನನ್ನ ನಿಶ್ಚಯ ಪರೀಕ್ಷೆಗಳ ಸಮಯದಲ್ಲಿ ಕಾಣಿಸುವ ಎಲ್ಲಾ ದೃಶ್ಯಗಳಲ್ಲಿಯೂ ಕೂಡ ಅಖಂಡವಾಗಿದೆ.

5. ನಾನು ಸಮಯಾನುಸಾರ ಜ್ಞಾನವನ್ನು ನೆನಪುಮಾಡಿಕೊಳ್ಳುವ ತೀವ್ರಪುರುಷಾರ್ಥಿ.

6. ನಾನು ಸಂಘಟನೆ ಮತ್ತು ಸ್ನೇಹದ ಪ್ರತ್ಯಕ್ಷ ಪ್ರಮಾಣವಾಗಿದ್ದೇನೆ.

7. ನಾನಾತ್ಮ ನನ್ನನ್ನು ನಾನು ಪರಿಶೀಲಿಸಿ, ನನ್ನೊಳಗಿನ ಕೊರತೆಗಳನ್ನು ದೂರ ಮಾಡಿಕೊಳ್ಳುತ್ತೇನೆ.

8. ನಾನು ಏಕಮತ, ಅಂತರ್ಮುಖಿ ಮತ್ತು ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತವಾಗಿ ಕರ್ಮ ಸಂಬಂಧದಲ್ಲಿ ಬರುತ್ತೇನೆ.

9. ನಾನು ಪರಸ್ಪರರ ಅವಗುಣಗಳನ್ನು ನೋಡುವುದಿಲ್ಲ, ಕೇಳುವುದಿಲ್ಲ ಮತ್ತು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ.

10. ನಾನು ನಿರಂತರ ನೆನಪಿನ ಯಾತ್ರೆ ಮತ್ತು ಪಡೆದಂತಹ ಶಿಕ್ಷಣವನ್ನು ನಿಜ ಜೀವನದಲ್ಲಿ ಅಳವಡಿಸಿಕೊಂಡು ಪ್ರತ್ಯಕ್ಷ ಪ್ರಮಾಣವನ್ನು ನೀಡುತ್ತೇನೆ.

11. ನಾನು ತಂದೆಯ ಸಮಾನ ಅಚಲವಾಗಿ, ಸ್ಥಿರವಾಗಿ ಇದ್ದೇನೆ.

*ಹೆಚ್ಚಿನ ಮಾಹಿತಿಗಾಗಿ*.

1.ಮನನ-ಚಿಂತನೆ(ಮನನ ಶಕ್ತಿ) : ಅವ್ಯಕ್ತ ಮುರಳಿ (01-02-1979 - ಮನನಶಕ್ತಿಯೇ ಮಾಯಾಜಿತ್ ರಾಗುವ ಸಾಧನ.

23-12-1987 - ಮನನ ಶಕ್ತಿ ಮತ್ತು ಮಗ್ನಸ್ಥಿತಿ.

10-01-1988 - ಮನನ ಮಾಡುವ ವಿಧಿ ಮತ್ತು ಮನನ ಶಕ್ತಿಯನ್ನು ಬೆಳೆಸಿಕೊಳ್ಳುವ ಯುಕ್ತಿಗಳು.

01-04-1981 - ಮನನ ಶಕ್ತಿಯ ಮೂಲಕ ಸರ್ವಶಕ್ತಿಗಳ ಸ್ವರೂಪದ ಅನುಭೂತಿ).